ದಿನಾಂಕ: 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎ.ಕೆ.ಕೆ. 6ನೇ ಪ್ರತಿವಾದಿ ಪರ ವಕೀಲರಿಂದಃ**

6. ನನ್ನ ಅಣ್ಣ ತಮ್ಮಂದಿಯರಿಗೆ ಮನೆ ನಡೆಯಿಸಿಕೊಂಡು ಹೋಗಲು ಹಣಕಾಸಿನ ಅಡಚಣೆ ಇತ್ತು ಎಂದರೆ ಸರಿಯಲ್ಲ. ನನ್ನ ಸಹೋದರರು ತಮ್ಮ ಮನೆತನದ ಅಡಚಣೆಗಾಗಿ ಸರ್ವೆ ನಂ.51/2 ರ 01ಎ-24ಗು ಜಮೀನನ್ನು ಪ್ರತಿವಾದಿ 5 ಮತ್ತು 6 ರವರಿಗೆ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 4 ರವರು 5ನೇ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರರಿಗೆ ಮನೆತನದ ಅಡಚಣೆ ಇದ್ದುದ್ದಕ್ಕಾಗಿ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಹೋದರರು ಕುಟುಂಬದ ಜಮೀನು ಮಾರಾಟ ಮಾಡಿರುವ ವಿಷಯ ನಮಗೆ ಗೊತ್ತಿದ್ದರೂ ಸಹ ಸಕಾಲದಲ್ಲಿ ನಾವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ.

7. ನಮ್ಮ ದಾವಾ ಆಸ್ತಿಗಳು ಹಾಗೂ ಮಾರಾಟ ಮಾಡಿದ ಆಸ್ತಿ ಮಳೆ ಬಂದಾಗ ಮಾತ್ರ ಬೆಳೆಯುವ ಜಮೀನುಗಳು ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6 ರವರ ಹೆಸರು ತಾವು ಖರೀದಿ ಮಾಡಿದ ದಾವಾ ಜಮೀನಿಗೆ ಹಚ್ಚಿರುವ ವಿಷಯ ನಮಗೆ ಗೊತ್ತಿದ್ದರೂ ಸಹ ಸಕಾಲದಲ್ಲಿ ನಾವು ಯಾವುದೇ ಕ್ರಮ

ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ನಾವು ಎಲ್ಲ ಸಹೋದರ ಸಹೋದರಿಯರು ಚೆನ್ನಾಗಿ ಇದ್ದುದ್ದರಿಂದ ಕ್ರಮ ಕೈಗೊಂಡಿರುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ